**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.954/2023**

| | | |
|---|---|---|
| ಸಾಕ್ಷಿದಾರರ ಹೆಸರು | : ಸಿ.ಎನ್.ರಮೇಶ್ | ಪ್ರಾಸಾ-11 |
| ತಂದೆಯ ಹೆಸರು | : ನರಸಿಂಹಯ್ಯ | ಚಾಸಾ-21 |
| ವಯಸ್ಸು | : 52 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಡಿ.ವೈ.ಎಸ್.ಪಿ | ದಿನಾಂಕಃ 09.06.2025. |
| ವಾಸಸ್ಥಳ | : ರಾಮನಗರ | |

**:ಮುಖ್ಯ ವಿಚಾರಣೆಃ ಪ್ರಾಜ್ಞ್ಯಾಸ.ಸ.ಅ. ರವರಿಂದ:**

ನಾನು ದಿ.20.06.2021 ರಿಂದ ದಿ.22.06.2023 ರವರೆಗೆ ಕುದುರೆಮುಖ ಪೋಲೀಸ್ ಠಾಣೆಯಲ್ಲಿ ಸರ್ಕಲ್ ಇನ್ಸ್ ಪೆಕ್ಟರ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ.28.05.2023 ರಂದು ಚಾಸಾ-20 ರವರಿಂದ ಕಡತವನ್ನು ಪಡೆದು ಮುಂದಿನ ತನಿಖೆಯನ್ನು ಮುಂದುವರಿಸಿ ಅದೇ ದಿನ ಅಪಘಾತಕ್ಕೀಡಾದ ವಾಹನದ ಸಂಖ್ಯೆ KA-18-B-1419 ಬಸ್ ಮಾಲೀಕರಾದ ಚಾಸಾ-15 ರವರಿಗೆ ಬಸ್ ದಾಖಲಾತಿಗಳನ್ನು ಹಾಜರುಪಡಿಸುವಂತೆ ನೋಟೀಸು ಜಾರಿ ಮಾಡಲಾಗಿರುತ್ತದೆ. ಅದೇ ದಿನ ಚಾಸಾ-9 ರಿಂದ 12 ಮತ್ತು ಚಾಸಾ-15 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿ.29.05.2023 ರಂದು ಚಾಸಾ-14 ರವರಿಗೆ ನೋಟೀಸನ್ನು ಜಾರಿ ಮಾಡಲಾಗಿ ಅಪಘಾತಕ್ಕೀಡಾದ ಬಸ್ಸಾದ KA-18-B-1419, ಮತ್ತು KA-05-NB-3270 ಕಾರಿನ ಕುರಿತು IMV ವರದಿಯನ್ನು ನೀಡಲು ಕೋರಿರುತ್ತೇನೆ. ದಿ.05.06.2023 ರಂದು ಚಾಸಾ-14 ರವರಿಂದ IMV ವರದಿಯನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ಚಾಸಾ-15 ರವರಿಂದ ನಷ್ಟ ಭರ್ತಿ ಪರಿಹಾರ ಬಾಂಡ್ ತೆಗೆದುಕೊಂಡು ಬಸ್ಸನ್ನು ಬಿಡುಗಡೆ ಮಾಡಲಾಗಿರುತ್ತದೆ. ದಿ.13.06.2023 ರಂದು ಚಾಸಾ-17 ರವರಿಂದ ನಷ್ಟ ಭರ್ತಿ ಪರಿಹಾರ ಬಾಂಡ್ ತೆಗೆದುಕೊಂಡು ಕಾರನ್ನು ಬಿಡುಗಡೆ ಮಾಡಲಾಗಿರುತ್ತದೆ. ದಿ.08.06.2023 ರಂದು ತನಿಖೆಯನ್ನು ಮುಕ್ತಾಯಗೊಳಿಸಿ ದೋ.ಪ.ಯನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗಿರುತ್ತದೆ.

ದಿ.28.05.2023 ಚಾಸಾ-15 ರವರಿಗೆ ನೀಡಿದ್ದ ನೋಟೀಸನ್ನು ನೋಡಿ ಗುರುತಿದ್ದು, ಅದನ್ನು ನಿಪಿ-28, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-28(ಎ) ಎಂದು ಗುರುತಿಸುತ್ತಾರೆ. ಅದೇ ದಿನ ಚಾಸಾ-15 ರವರು ನೀಡಿದ ಪ್ರತ್ಯುತ್ತರವನ್ನು ನಿಪಿ-29, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-29(ಎ) ಎಂದು ಗುರುತಿಸುತ್ತಾರೆ. ಚಾಸಾ-15 ರವರು ನೀಡಿದ ನಷ್ಟ ಭರ್ತಿ ಪರಿಹಾರ ಬಾಂಡ್ ನ್ನು ನಿಪಿ-30, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-30(ಎ) ಎಂದು ಗುರುತಿಸುತ್ತಾರೆ. ಚಾಸಾ-9 ರಿಂದ 11 ರವರು ನಿಪಿ-21 ರಿಂದ 23 ರಂತೆ ನನ್ನ ಮುಂದೆ ಹೇಳಿಕೆಯನ್ನು ನೀಡಿರುತ್ತಾರೆ. ನಿಪಿ-6 ರಿಂದ 17 ರವರೆಗೆ ಕಾಣುತ್ತಿರುವ ವಾಹನಗಳನ್ನು ಪುನಃ ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ.ಎಸ್.ಎ. ವಕೀಲರಿಂದಃ**

ದಿ.28.05.2023 ರಂದು ಚಾಸಾ-20 ರವರಿಂದ ಯಾವುದೇ ಕಡತವನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಕಡತವನ್ನು ಪಡೆಯುವಾಗ ಸಾಕ್ಷಿಗಳ ಹೇಳಿಕೆ ತೆಗೆದುಕೊಳ್ಳುವುದು ಮಾತ್ರ ಬಾಕಿ ಇತ್ತು. ಚಾಸಾ-15 ರವರಿಗೆ ಯಾವುದೇ ನೋಟೀಸ್ ಜಾರಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಚಾಸಾ-9 ರಿಂದ 11 ಮತ್ತು 15 ರವರ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-14 ರವರಿಗೆ ಯಾವುದೇ ನೋಟೀಸ್ ಜಾರಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ವಾಹನ ಸಂಖ್ಯೆ KA-05-NB-3270 ಕುರಿತಂತೆ ಯಾವುದಿಯನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ದಿ.05.06.2023 ರಂದು ಚಾಸಾ-14 ರವರಿಂದ ಯಾವುದೇ ವರದಿ ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಚಾಸಾ-15 ರವರಿಂದ ಯಾವುದೇ ನಷ್ಟ ಭರ್ತಿ ಪರಿಹಾರದ ಬಾಂಡ್ ನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ದಿ.13.06.2023 ರಂದು ಯಾವುದೇ ರೀತಿಯ ವಾಹನಗಳನ್ನು ಬಿಡುಗಡೆ ಮಾಡಲಾಗಿರುವುದಿಲ್ಲ ಎಂದರೆ ಸರಿಯಲ್ಲ. ಪ್ರಸ್ತುತ ಪ್ರಕರಣದಲ್ಲಿ ಯಾವುದೇ ತನಿಖೆ ಮಾಡದಿದ್ದರೂ ಪಿರ್ಯಾದುದಾರರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ಪಿರ್ಯಾದುದಾರರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ದೋ.ಪ.ಯನ್ನು ಸಲ್ಲಿಸಲಾಗಿರುತ್ತದೆ ಎಂದರೆ ಸರಿಯಲ್ಲ.

ಸಾಮಾನ್ಯವಾಗಿ ಯಾವುದೇ ನೋಟೀಸ್ ಜಾರಿ ಮಾಡಿದಾಗ ಅದರ ಎಡಭಾಗದಲ್ಲಿ ಸಹಿಯನ್ನು ಪಡೆದುಕೊಂಡಿರುತ್ತೇವೆ ಎಂದರೆ ಸರಿ. ಖಾಲಿ ಹಾಳೆಗೆ ಸಹಿಯನ್ನು ಪಡೆದು ನೋಟೀಸ್ ಜಾರಿಯಾಗಿದೆ ಎಂದು ತೋರಿಸಲು ಸುಳ್ಳು ದಾಖಲಾತಿಯನ್ನು ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ಅಪಘಾತಕ್ಕೀಡಾದ ವಾಹನಕ್ಕೂ ನೀವು ಹಾಜರುಪಡಿಸಿರುವ ದಾಖಲಾತಿಗು ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.